| | | | | |
|---|---|---|---|---|
| 2. | ಮಲೇರಿಯ ನಿಯಂತ್ರಣ-ಕಾರ್ಯಕ್ರಮ (ಗ್ರಾಮಾಂತರ) ಯೋಜನೇತರ | 750-00 | - | 750-00 |
| 3. | ನಗರ ಮಲೇರಿಯ ಯೋಜನೆ | 100-00 | 100-00 | 200-00 |

---

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಉತ್ತರಗಳು ಬರೀ ಕಾಗದಲ್ಲಿದೆಯೇ ಹೊರತು ಮಲೇರಿಯಾ ರೋಗ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ಒಂದು ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಬೇಕಾಗುತ್ತದೆ. ಮುಖ್ಯವಾಗಿ ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಕೂಡ ಟೆಕ್ನಿಷಿಯನ್‌ಗಳು ಇಲ್ಲ. ಕಡೂರಿನಲ್ಲಿ ಏನಾದರೂ ರಕ್ತ ಪರೀಕ್ಷೆಯನ್ನು ಮಾಡಿಸಿ, ಅದರ ಫಲಿತಾಂಶವನ್ನು ತಿಳಿದುಕೊಂಡು ಆ ರೋಗಿಗೆ ಶುಶ್ರೂಷೆ ಮಾಡುವುದರಲ್ಲಿ, ಆ ರೋಗ ಉಲ್ಬಣವಾಗಿರುತ್ತದೆ. ಈಗಾಗಲೇ ಕಡೂರು ತಾಲ್ಲೂಕಿನಾದ್ಯಂತ ಈ ರೋಗದ ಹಾವಳಿ ಜಾಸ್ತಿಯಾಗುರುವುದರಿಂದ ಸರ್ಕಾರ ಆದಷ್ಟು ಬೇಗ ಕಡೂರಿನಲ್ಲೇ ಒಂದು ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಿ ಸೊಳ್ಳೆಗಳನ್ನು ನಿರ್ಮೂಲನ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಮೆಲಾಥಿನ್ ಔಷಧಿಗೆ ಸೊಳ್ಳೆ ಸಾಯುವುದಿಲ್ಲ. ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಮೆಲಾಥಿನ್‌ನಿಂದ ಸೊಳ್ಳೆ ನಿರ್ಮೂಲನೆ ಸಾಧ್ಯವಿಲ್ಲ, ಅದಕ್ಕೆ ಐತಾನ್ ಎಂಬ ಒಂದು ಬಗೆಯ ಪೌಡರ್ ಅನ್ನು ಉಪಯೋಗಿಸಬಹುದು ಎಂಬ ವಿಚಾರವನ್ನು ಹೇಳುತ್ತಾರೆ. ಆದುದರಿಂದ ಆದಷ್ಟು ಬೇಗನೆ ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಕಡೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಕಳೆದ $1\frac{1}{2} - 2$ ವರ್ಷಗಳಿಂದ ಈ ಮಲೇರಿಯಾ ರೋಗ ಸ್ವಲ್ಪ ಮಟ್ಟಿಗೆ ಎಲ್ಲೆಡೆ ಹರಡುತ್ತಿದೆ. ಮಂಗಳೂರು ಮತ್ತು ಚಿಕ್ಕಮಗಳೂರು ಈ ಭಾಗದಲ್ಲಿ ಈ ರೋಗ ವ್ಯಾಪಕವಾಗಿರತಕ್ಕದ್ದನ್ನು ನಾನು ನೋಡಿದ್ದೇನೆ. ಕಡೂರಿನಲ್ಲಿ ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸದಸ್ಯರು ಕೋರಿದ್ದಾರೆ. ಅದರ ಬಗ್ಗೆ ಸರ್ಕಾರವು ವಿಶೇಷವಾದ ಪರಿಶೀಲನೆ ಮಾಡುತ್ತದೆ.

**ಶಿಕ್ಷಕರ ನೇಮಕಾತಿಯಲ್ಲಿ ಮಹಿಳೆಯರಿಗೆ ಮೀಸಲು**

2699 - ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಆಯ್ಕೆಯಲ್ಲಿ ಶೇಕಡಾ 50 ಭಾಗ ಮಹಿಳೆಯರಿಗೆ ಮೀಸಲಿಡಲಾಗಿದೆಯೇ. ಅದೇ ರೀತಿ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಲ್ಲಿ ಕೂಡ ಮಹಿಳೆಯರಿಗಾಗಿ ಮೀಸಲು ನೀತಿ ಅಳವಡಿಸಿಕೊಳ್ಳುವುದರ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಪ್ರಾಥಮಿಕ - ಹೌದು

ಪ್ರೌಢಶಾಲೆ ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ತಾವು ಶೇಕಡ 50ರಷ್ಟು ಮೀಸಲಾತಿಯನ್ನು ಶಿಕ್ಷಕರ ನೇಮಕಾತಿಯಲ್ಲಿ ಈಗಾಗಲೇ ಮಹಿಳೆಯರಿಗೆ ಕೊಟ್ಟಿದ್ದೀರಿ. ಈಗ ಇದನ್ನು ಹೈಸ್ಕೂಲ್ ಮಟ್ಟದಲ್ಲೂ ಕೊಡುವುದರಿಂದ ಬಹುಶಃ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟ ಈ ಒಂದು ಸರ್ಕಾರ ಅವರಿಗೆ ಮಾನ್ಯತೆಯನ್ನು ಕೊಟ್ಟಂತಾಗುತ್ತದೆ. ಅದರ ಜೊತೆಗೆ ಮಕ್ಕಳ ಮನಸ್ಸನ್ನು ಅರಿತಿರತಕ್ಕಂಥವರು ಮಹಿಳೆಯರೇ ಹೆಚ್ಚು ಶಿಕ್ಷಕರಾದರೆ ಬಹುಶಃ ಶಿಕ್ಷಣ ಯಶಸ್ವಿಯಾಗುತ್ತದೆಂದು ನನ್ನ ಅಭಿಪ್ರಾಯ. ತಾವು ದಯವಿಟ್ಟು ಮಹಿಳೆಯರಿಗೆ ಶೇಕಡ 50ರಷ್ಟು ಮೀಸಲಾತಿ ಈ ವಿಚಾರದಲ್ಲಿ ಮಾಡಲು ಆಗದೆ ಇದ್ದರೂ ಕೊನೆಗೆ ಶೇಕಡ 30ರಷ್ಟಾದರೂ ಮಾಡಿದರೆ ಅವರನ್ನು ಅಕಾಮಡೇಟ್ ಮಾಡಬಹುದು. ಏಕೆಂದರೆ ಬೇರೆ ಇಲಾಖೆಗಳಿಗೆ ಹೆಣ್ಣು ಮಕ್ಕಳು ಹೋಗುವುದಕ್ಕೆ ಸಾಧ್ಯವಿಲ್ಲ. ತಾವು ಶಿಕ್ಷಕರೆ, ತಾವು ಮಹಿಳೆಯರಿಗೆ ಹೆಚ್ಚು ಆದ್ಯತೆಯನ್ನು ಕೊಡತಕ್ಕಂತಹವರು, ತಾವು ಇದರ ಬಗ್ಗೆ ಏನು ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈ ಪ್ರಾಥಮಿಕ ಶಾಲಾ ಉಪಧ್ಯಾಯರುಗಳನ್ನು ನೇಮಕ ಮಾಡುವುದರಲ್ಲಿ ಶೇಕಡ 50ರಷ್ಟು ಹುದ್ದೆಗಳನ್ನು ಮಹಿಳೆಯರಿಗೋಸ್ಕರವೇ ಮೀಸಲಿಡುವುದು ಇದೆ. ಅದನ್ನು ನಾವು ಈಗಾಗಲೇ ಕಾನೂನು ಪ್ರಕಾರ ಕೈಗೊಂಡಿದ್ದೇವೆ. ಹೈಸ್ಕೂಲ್‌ನಲ್ಲಿ ಈ ವಿಷಯದ ಬಗ್ಗೆ ನಾವು ತೀರ್ಮಾನ ಮಾಡಿಲ್ಲ. ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಲ್ಲಿ ಪಾಠ ಕಲಿಯುವ ಮಕ್ಕಳು ಬಹಳ ಚಿಕ್ಕವಯಸ್ಸಿನವರಿರುತ್ತಾರೆ. ಹೆಣ್ಣುಮಕ್ಕಳು ಅಲ್ಲಿ ಹೆಚ್ಚು ಗಮನವನ್ನು ಕೊಟ್ಟು ಆ ಮಕ್ಕಳಿಗೆ ಪಾಠಗಳನ್ನು ಚೆನ್ನಾಗಿ ಹೇಳಿಕೊಡಬಹುದೆನ್ನುವ ದೃಷ್ಟಿಯಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರ ನೇಮಕಾತಿಯಲ್ಲಿ ನಾವಾಗಿಯೇ ಶೇಕಡ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಇಟ್ಟಿದುದ್ದು. ಶೇಕಡಾ 30ರಷ್ಟು ಮೀಸಲಾತಿಯನ್ನು ಇಟ್ಟಿದ್ದರೂ ಕೂಡ ಶೇಕಡಾ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹೈಸ್ಕೂಲಿಗಳಲ್ಲಿ ಮಹಿಳೆಯರಿಗೆ ಮೀಸಲಾತಿಯ ಬಗ್ಗೆ ತೀರ್ಮಾನ ಮಾಡಿಲ್ಲ. ಜನರಲ್ ಮೆರಿಟ್‌ನಲ್ಲಿ ಹೆಚ್ಚು ಜನ ಮಹಿಳೆಯರು ಆಯ್ಕೆಯಾಗುವ ಸಾಧ್ಯತೆ ಇದೆ. ಆದರೆ ಹೈಸ್ಕೂಲ್‌ನಲ್ಲಿ ಈ ಬಗ್ಗೆ ಮೀಸಲಾತಿಯನ್ನು ಮಾಡಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಶೇಕಡ 50ರಷ್ಟು ಮೀಸಲಾತಿಯನ್ನು ಮಾಡಿಲ್ಲ, ಕೊನೆಯಪಕ್ಷ ಶೇಕಡಾ 30ರಷ್ಟಾದರೂ ಮಾಡುವುದಕ್ಕೆ ದಯವಿಟ್ಟು ಪ್ರಯತ್ನ ಮಾಡಿ.

ಅಧ್ಯಕ್ಷರು : ಆಲೋಚನೆ ಮಾಡಿ ಪರಿಗಣಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

**ದ.ಕನ್ನಡ ಜಿಲ್ಲೆಯಲ್ಲಿರುವ ಪದವಿಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡ**

2705 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದ.ಕ. ಜಿಲ್ಲೆಯಲ್ಲಿ ಎಷ್ಟು ಪದವಿಪೂರ್ವ ಕಾಲೇಜುಗಳಿವೆ, ಸ್ವಂತ ಕಟ್ಟಡ ಒದಗಿಸಲಾಗಿದೆ (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಸ್ವಂತ ಕಟ್ಟಡ ಇಲ್ಲದಿರುವ ಪದವಿಪೂರ್ವ ಕಾಲೇಜುಗಳಾವುವು (ತಾಲ್ಲೂಕುವಾರು ವಿವರ ಒದಗಿಸುವುದು)